**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಂಜುನಾಥ ಭಂಡಾರಿ ಇವರು ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಲು ಕೋರಿರುವ ಬಗ್ಗೆ.**

**ವಿಷಯ:**

ಗ್ರಾಮ ಪಂಚಾಯತಿಗಳಲ್ಲಿ ತೆರಿಗೆ ವಸೂಲಿಗೆ ಗರ ಸಂಗ್ರಹ ಗುರಿ ಎಂಬ ಶೀರ್ಷಿಕೆಯಡಿ ದಿನಾಂಕ: 05.02.2024ರ ವಿಜಯವಾಣಿ ಪತ್ರಿಕೆಯ ವರದಿ ಕುರಿತು.

******

**ಉತ್ತರ:**

- ಗ್ರಾಮ ಪಂಚಾಯತಿಗಳಲ್ಲಿ ತೆರಿಗೆ ವಸೂಲಾತಿ ಮಾಡಲು ಪಂಚತಂತ್ರ 2.0 ತಂತ್ರಾಂಶದ ಮೊಬೈಲ್ ಆಪ್‌ನ್ನು ಅಭಿವೃದ್ಧಿಪಡಿಸಿ, ಅನುಷ್ಠಾನಗೊಳಿಸಲಾಗಿದ್ದು, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ತೆರಿಗೆ, ದರ ಮತ್ತು ಫೀಜುಗಳು) ನಿಯಮಗಳು - 2021 ರನ್ವಯ ಗ್ರಾಮ ಪಂಚಾಯತಿಗಳ ತೆರಿಗೆ ದರ ಮತ್ತು ಫೀಜುಗಳನ್ನು ವಿಧಿಸಲು ಸ್ವಯಂಚಾಲಿತ ತೆರಿಗೆ ಲೆಕ್ಕಾಚಾರ ಮಾಡುವ ವಿಧಾನವನ್ನು ಸೆರೆಹಿಡಿಯಲು Automation of Property Tax ಮಾಡ್ಯುಲ್ ಅನ್ನು ಸದರಿ ತಂತ್ರಾಂಶದ "ತೆರಿಗೆ ಸಂಗ್ರಹಣೆ" ಮಾಡ್ಯುಲ್ ನಲ್ಲಿ ಅಭಿವೃದ್ಧಿಪಡಿಸಿ ಅನುಷ್ಠಾನಗೊಳಿಸಲಾಗಿದೆ.
- ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006 ರ ನಿಯಮ 21 ರನ್ವಯ ಗ್ರಾಮ ಪಂಚಾಯತಿಗಳಲ್ಲಿ ತೆರಿಗೆ ವಸೂಲಾತಿ ಪ್ರಕ್ರಿಯೆಯಲ್ಲಿ ನಡೆಯಬಹುದಾದ ಅವ್ಯವಹಾರಗಳನ್ನು ತಡೆಗಟ್ಟಿ, ಪಾರದರ್ಶಕತೆಯನ್ನು ಕಾಪಾಡುವ ಉದ್ದೇಶದಿಂದ ತೆರಿಗೆ, ದರ ಮತ್ತು ಫೀಜುಗಳನ್ನು ಸಂಗ್ರಹಣೆ ಮಾಡಲು ನಮೂನೆ-3ರಲ್ಲಿ ನಿಗಧಿಪಡಿಸಿರುವ ಮ್ಯಾನ್ಯುಯಲ್ ರಶೀದಿಗಳನ್ನು ನಿರ್ಬಂಧಿಸಿ, ಮ್ಯಾನ್ಯುಯಲ್ ರಶೀದಿಗಳನ್ನು ನೀಡುವ ಬದಲು ಡಿಜಿಟಲ್ ರಶೀದಿಗಳನ್ನು ಪಂಚತಂತ್ರ 2.0 ತಂತ್ರಾಂಶದಲ್ಲಿ ಸೃಜಿಸಿ, ಸಾರ್ವಜನಿಕರಿಗೆ ನೀಡುವ ಬಗ್ಗೆ ಸರ್ಕಾರಿ ಆದೇಶವನ್ನು ಹೊರಡಿಸಲಾಗಿದೆ.

- ಪಂಚತಂತ್ರ 2.0 ತಂತ್ರಾಂಶದಲ್ಲಿ "ತೆರಿಗೆ ಸಂಗ್ರಹಣೆ" ಮಾಡ್ಯುಲ್ ನ ಮೂಲಕ Automation of Property Tax ಕಡ್ಡಾಯಗೊಳಿಸಿರುವುದರಿಂದ, ಗ್ರಾಮ ಪಂಚಾಯತಿಗಳಲ್ಲಿ ನಿಗಧಿಪಡಿಸಲಾಗಿದ್ದ ಆಸ್ತಿ ತೆರಿಗೆಯ ಬೇಡಿಕೆಯು ಕಳೆದ ಆರ್ಥಿಕ ವರ್ಷಗಳಿಗೆ ಹೋಲಿಸಿದಲ್ಲಿ, ಪ್ರಸ್ತುತ ಸಾಲಿನಲ್ಲಿ ಆಸ್ತಿ ತೆರಿಗೆಯ ಬೇಡಿಕೆಯು ಶೇಕಡ.80 ರಷ್ಟು ಹೆಚ್ಚಿಕೆಯಾಗಿರುತ್ತದೆ.

| FY | Current Demand (in Rs Crore) | Total Demand (in Rs Crore) | Collection (in Rs Crore) | % of Collection against Current Demand |
|---|---|---|---|---|
| 2017-18 | 507.28 | 1848.18 | 322.77 | 64 |
| 2018-19 | 623.24 | 1895.61 | 483.49 | 78 |
| 2019-20 | 662.24 | 1887.56 | 633.55 | 96 |
| 2020-21 | 711.12 | 1940.29 | 683.92 | 96 |
| 2021-22 | 766.08 | 2035.52 | 749.30 | 98 |
| 2022-23 | 786.50 | 2268.49 | 571.94 | 73 |
| 2023-24 | 1290.14 | 3441.10 | 607.39 | 47 |

- **ಗ್ರಾಮ ಪಂಚಾಯತಿಗಳ ಆಸ್ತಿ ತೆರಿಗೆ ಆನ್-ಲೈನ್ ಮೂಲಕ ಸಂಗ್ರಹಿಸಲು ಹಾಗೂ ಪಾವತಿಸಲು ಇಲಾಖೆಯಿಂದ ಕೈಗೊಂಡಿರುವ ಕ್ರಮಗಳು:**
  - ಗ್ರಾಮ ಪಂಚಾಯತಿಯ ಆಸ್ತಿ ತೆರಿಗೆಯನ್ನು ಆನ್-ಲೈನ್ ಮೂಲಕ ಪಾವತಿಸಲು ಇಲಾಖೆಯು "ಬಾಪೂಜಿ ಸೇವಾ ಕೇಂದ್ರ" ಪೋರ್ಟಲ್ ಮತ್ತು "ಬಾಪೂಜಿ ಸೇವಾ ಕೇಂದ್ರ" ಮೊಬೈಲ್ ಅಪ್ಲಿಕೇಶನ್ ಅನ್ನು ಅಭಿವೃದ್ಧಿಪಡಿಸಿ ಅನುಷ್ಠಾನಗೊಳಿಸಿದೆ ಮತ್ತು ಗ್ರಾಮ ಪಂಚಾಯತ್‌ಗಳಲ್ಲಿ ಸೇವಾ ವಿತರಣೆಯನ್ನು ಹೆಚ್ಚಿಸಲು ಮತ್ತು ಗ್ರಾಮ ಪಂಚಾಯತ್ ಸೇವೆಗಳನ್ನು ಆನ್‌ಲೈನ್‌ನಲ್ಲಿ ಮೂಲಕ ನಾಗರಿಕರಿಗೆ ನೀಡಲು ಅನುಕೂಲಕರ ವೇದಿಕೆಯನ್ನು ಒದಗಿಸುತ್ತದೆ.
  - ಈ ಪೋರ್ಟಲ್ ಮತ್ತು ಅಪ್ಲಿಕೇಶನ್ ಮೂಲಕ, ನಾಗರಿಕರು ಸೇವೆಗಳಿಗೆ ಸುಲಭವಾಗಿ ಅರ್ಜಿ ಸಲ್ಲಿಸಬಹುದು, ಪ್ರಮಾಣಪತ್ರಗಳು/ಸ್ವೀಕೃತಿ ಪತ್ರವನ್ನು ಪಡೆಯಬಹುದು ಮತ್ತು ಆನ್‌ಲೈನ್ ನಲ್ಲಿ ತೆರಿಗೆ ಪಾವತಿಯನ್ನು ಮಾಡಬಹುದು. ಇಂಟರ್ನೆಟ್ ಬ್ಯಾಂಕಿಂಗ್, ಡೆಬಿಟ್ ಕಾರ್ಡ್, ಕ್ರೆಡಿಟ್ ಕಾರ್ಡ್ ಮತ್ತು UPI ಸೇರಿದಂತೆ ಬಹು ಪಾವತಿ ಆಯ್ಕೆಗಳನ್ನು ಪರಿಚಯಿಸಲಾಗಿದೆ.

- ತೆರಿಗೆ ಸಂಗ್ರಹವನ್ನು ಸುಧಾರಿಸಲು ಮತ್ತು ಗ್ರಾಮ ಪಂಚಾಯತಿಗಳಲ್ಲಿ ಡಿಜಿಟಲ್ ಪಾವತಿಗಳನ್ನು ಉತ್ತೇಜಿಸುವ ಸಲುವಾಗಿ ತೆರಿಗೆ ವಸೂಲಾತಿಗಾಗಿ, 5951 ಗ್ರಾಮ ಪಂಚಾಯಿತಿಗಳಿಗೆ Android PoS ಯಂತ್ರಗಳನ್ನು ವಿತರಿಸಲಾಗಿದೆ. ಸದರಿ ಯಂತ್ರಗಳನ್ನು ಮನೆ-ಮನೆಗೆ ತೆರಳಿ ತೆರಿಗೆ ಸಂಗ್ರಹಣೆಯನ್ನುಮಾಡಬಹುದಾಗಿದೆ. ಹಾಗೂ ತೆರಿಗೆ ಸಂಗ್ರಹಣೆಯ ವಿಧಾನವನ್ನು ಸುಲಭಗೊಳಿಸಿ, ಡೇಟಾ ಎಂಟ್ರಿಯನ್ನು ಕಡಿಮೆ ಮಾಡಿ ಮತ್ತು ಗ್ರಾಮ ಪಂಚಾಯತಿ ಸಿಬ್ಬಂದಿಗಳ ದಕ್ಷತೆಯನ್ನು ಹೆಚ್ಚಿಸಲಿದೆ.
- Android PoS ಯಂತ್ರಗಳ ಮೂಲಕ ಏಪ್ರಿಲ್ 1, 2023 ರಿಂದ ರೂ.412.29 ಕೋಟಿ ಸಂಗ್ರಹಿಸಲಾಗಿದೆ.
- ದೇಶದಲ್ಲಿ ಪ್ರಪ್ರಥಮ ಬಾರಿಗೆ ಗ್ರಾಮ ಪಂಚಾಯತಿಗಳ ಆಸ್ತಿ ತೆರಿಗೆ ಯನ್ನು PhonePe, Google pay, ಮುಂತಾದ ಮಾಧ್ಯಮಗಳ ಮೂಲಕ ಪಾವತಿಸಲು ಸಾರ್ವಜನಿಕರಿಗೆ ಅನುವು ಮಾಡಿಕೊಡಲಾಗಿದೆ. ಸಾರ್ವಜನಿಕರು ಗ್ರಾಮ ಪಂಚಾಯತಿಗಳಿಗೆ ಭೇಟಿ ನೀಡದೇ, ಆಸ್ತಿ ತೆರಿಗೆಯನ್ನು ಪಾವತಿಸಬಹುದಾಗಿದೆ. ಏಪ್ರಿಲ್ 1, 2023 ರಿಂದ ಒಟ್ಟು ರೂ. PhonePe, Google Pay ಮೂಲಕ ರೂ.3.49 ಕೋಟಿಗಳನ್ನು ಸಂಗ್ರಹಿಸಲಾಗಿದೆ.
- ಹಾಗೂ ಏಪ್ರಿಲ್ 1, 2023 ರಿಂದ ಬಾಪೂಜಿ ಸೇವಾ ಕೇಂದ್ರ" ಪೋರ್ಟಲ್ ಮೂಲಕ ರೂ.92.23 ಕೋಟಿ ಆನ್-ಲೈನ್ ಆಸ್ತಿ ತೆರಿಗೆಯನ್ನು ಸಂಗ್ರಹಿಸಲಾಗಿದೆ.
- ಒಟ್ಟು ಏಪ್ರಿಲ್ 1, 2023 ರಿಂದ ರೂ.508.01 ಕೋಟಿ ಗಳ ಆಸ್ತಿ ತೆರಿಗೆ ಮತ್ತು ಫೀಜುಗಳನ್ನು ಆನ್-ಲೈನ್ ಮೂಲಕ ಸಂಗ್ರಹಿಸಲಾಗಿದೆ.
- ಅದರಂತೆ, ಇಂಟರ್ನೆಟ್ ಬ್ಯಾಂಕಿಂಗ್, ಡೆಬಿಟ್ ಕಾರ್ಡ್, ಕ್ರೆಡಿಟ್ ಕಾರ್ಡ್ ಮತ್ತು UPI ಸೇರಿದಂತೆ ನಗದು, ಚೆಕ್, ಡಿ.ಡಿ ಮೂಲಕ ಆಸ್ತಿ ತೆರಿಗೆ ಸಂಗ್ರಹಿಸಲು Android PoS ಯಂತ್ರ ಮತ್ತು ಪಂಚತಂತ್ರ 2.0 ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ.
- Android PoS ಯಂತ್ರ ಮೂಲಕ ಆಸ್ತಿ ತೆರಿಗೆ ವಸೂಲಾತಿ ಮಾಡಿದಲ್ಲಿ, ಪಂಚತಂತ್ರ 2.0 ತಂತ್ರಾಂಶದಲ್ಲಿ ಸದರಿ ಆಸ್ತಿಗಳಿಗೆ ನಮೂದಿಸಲಾದ ಆಸ್ತಿ ಮಾಲೀಕರ ಮೊಬೈಲ್ ಸಂಖ್ಯೆಗೆ ತೆರಿಗೆ ರಶೀದಿಯನ್ನು ಎಸ್.ಎಂ.ಎಸ್ ಮೂಲಕ ಕಳುಹಿಸಲಾಗುತ್ತಿದೆ.
- ಗ್ರಾಮ ಪಂಚಾಯತಿಗಳಿಗೆ ಒಂದರಂತೆ ನೀಡಲಾದ Android PoS ಯಂತ್ರಗಳೊಂದಿಗೆ ಜನಸಂಖ್ಯೆ ಆಧಾರದ ಮತ್ತೊಮ್ಮೆ Android PoS ಯಂತ್ರಗಳನ್ನು ಒದಗಿಸುವ ಬಗ್ಗೆ ಪರಿಶೀಲಿಸಲಾಗುವುದು.

- ಗ್ರಾಮ ಪಂಚಾಯತಿಗಳ ಆಸ್ತಿ ತೆರಿಗೆಯನ್ನು ಗ್ರಾಮ ಪಂಚಾಯತಿಗಳಿಗೆ ನೀಡಲಾದ Android PoS ಯಂತ್ರಗಳ ಮೂಲಕವೇ ಮಾತ್ರ ಕಡ್ಡಾಯವಾಗಿ ಸಂಗ್ರಹಿಸಲು ನಿರ್ದೇಶನ ನೀಡಿರುವುದಿಲ್ಲ. Android PoS ಯಂತ್ರಗಳ ಆಸ್ತಿ ತೆರಿಗೆ ವಸೂಲಾತಿ ಮಾಡಲು ಒಂದು ಸಾಧನವಾಗಿದ್ದು, ಗ್ರಾಮ ಪಂಚಾಯತಿಗಳಲ್ಲಿ ನಗದು, ಚೆಕ್, ಡಿ.ಡಿ ಮೂಲಕ ಆಸ್ತಿ ತೆರಿಗೆ ಸಂಗ್ರಹಿಸಿ, ಮಾಹಿತಿಯನ್ನು ಪಂಚತಂತ್ರ 2.0 ತಂತ್ರಾಂಶದಲ್ಲಿ ಅಳವಡಿಸಬಹುದಾಗಿದೆ.
- ಆದರೇ Android PoS ಯಂತ್ರ ಮತ್ತು ಇತರೆ ಡಿಜಿಟಲ್ ಸಾಧನಗಳ ಬಳಕೆಯಿಂದಾಗಿ, ಸಾರ್ವಜನಿಕರಿಗೆ ಆಸ್ತಿ ತೆರಿಗೆ ಪಾವತಿಯಲ್ಲಿ ಪಾರದರ್ಶಕತೆ, ಉತ್ತರದಾಯಿತ್ವ ಮತ್ತು ತಿಳುವಳಿಕೆ ಹೊಂದಲು ಸಹಕಾರಿಯಾಗಲಿದೆ.

ಆದುದರಿಂದ, ಹಂತ ಹಂತವಾಗಿ ಗ್ರಾಮ ಪಂಚಾಯತಿಗಳಲ್ಲಿ ಡಿಜಿಟಲ್ ಆಸ್ತಿ ತೆರಿಗೆಯನ್ನು ಕಡ್ಡಾಯಗೊಳಿಸುವಲ್ಲಿ ಸರ್ಕಾರವು ಕ್ರಮವಹಿಸುತ್ತದೆ.

ಸಂ: ಗ್ರಾಅಪ/31/ಇ-ಆಡಳಿತ/2024

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು
ಪಂ.ರಾಜ್ ಹಾಗೂ ಮಾಹಿತಿ
ತಂತ್ರಜ್ಞಾನ ಮತ್ತು ಜೈವಿಕ
ತಂತ್ರಜ್ಞಾನ ಸಚಿವರು.